ವಿಜಯವಾಣಿ
ಕನ್ನಡಿಗರ ಧ್ವನಿ

# ಭಗವಾನ್ ಮಹಾವೀರ ಜೈನ್ ಕಾಲೇಜಿನಲ್ಲಿ ಪ್ರತನ-ಸಂಸ್ಕೃತೋತ್ಸವ

## ಪ್ರದರ್ಶಿನೀ ಪಾರಂಪರಿಕ ವಿಷಯಗಳ ವಸ್ತು ಪ್ರದರ್ಶನ » ಒಂಬತ್ತು ಮಳಿಗೆಗಳಲ್ಲೂ ಒಂದೊಂದು ವಿಷಯಗಳ ಅನಾವರಣ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸಂಸ್ಕೃತಿ- ಸಂಸ್ಕೃತ ಮತ್ತು ಸನಾತನ ಭಾರತೀಯ ಪರಂಪರೆಯ ವಿವಿಧ ಆಯಾಮಗಳನ್ನು ಪರಿಚಯಿಸುವ 'ಪ್ರತನ-ಸಂಸ್ಕೃತೋತ್ಸವ' ಕಾರ್ಯಕ್ರಮ ವಿಶ್ವೇಶ್ವರಪುರದ ಭಗವಾನ್ ಮಹಾವೀರ ಜೈನ್ ಕಾಲೇಜಿನಲ್ಲಿ ಶುಕ್ರವಾರ ನಡೆಯಿತು.

ಕಾಲೇಜಿನ ಸಂಸ್ಕೃತ ವಿಭಾಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಾಲಿಗೆಗೆ ಕಸರತ್ತು ನೀಡುವ ಜಿಹ್ವಾಕೇಲಿ, ರಸಪ್ರಶ್ನೆ, ಸ್ಮರಣಶಕ್ತಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಕೇಂದ್ರಬಿಂದುವಾಗಿದ್ದ 'ಪ್ರದರ್ಶಿನೀ' ಎಂಬ ಪಾರಂಪರಿಕ ವಿಚಾರಗಳ ಬಗ್ಗೆ ಪ್ರತ್ಯೇಕವಾಗಿ 9 ಮಳಿಗೆಗಳನ್ನು ತೆರೆಯಲಾಗಿತ್ತು. ಪ್ರತಿ ಮಳಿಗೆಯಲ್ಲಿ ವಿದ್ಯಾರ್ಥಿಗಳು ಒಂದೊಂದು ವಿಷಯದ ಬಗ್ಗೆ ಮಾಹಿತಿ ನೀಡಿದರು.

**ವಿಶ್ವಕರ್ಮ:** ಈ ಮಳಿಗೆಯಲ್ಲಿ ಹೊಯ್ಸಳರ ಕಾಲದ ಬೇಲೂರಿನ ಶ್ರೀ ಚನ್ನಕೇಶವ ದೇವಾಲಯದ ವಾಸ್ತುಶಿಲ್ಪಗಳ ಬಗ್ಗೆ ವಿದ್ಯಾರ್ಥಿಗಳು ಪರಿಚಯ ಮಾಡಿಕೊಟ್ಟರು. ಗರುಡ ಸ್ಥಂಭ, ಶಿಲಾಬಾಲೆ, ರಾಮಾಯಣ, ಮಹಾಭಾರತ, ಉಪನಿಷತ್ತುಗಳ ಬಗ್ಗೆ ಮತ್ತು ಅಂದಿನ ಅರಸರು, ವಾಸ್ತುಶಿಲ್ಪಿಗಳು ದೇವಸ್ಥಾನವನ್ನು ಹೇಗೆ ನಿರ್ಮಿಸಿದರು ಎಂಬುದನ್ನು ವಿವರಿಸಿದರು.



ವಿಜಯವಾಣಿ ಚಿತ್ರ

ಭಗವಾನ್ ಮಹಾವೀರ ಜೈನ್ ಕಾಲೇಜಿನ ಸಂಸ್ಕೃತ ವಿಭಾಗ ವಿ.ವಿ.ಪುರದ ಜೈನ್ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ಪ್ರತನ-ಸಂಸ್ಕೃತೋತ್ಸವದಲ್ಲಿ ವಿದ್ಯಾರ್ಥಿಗಳ ವಸ್ತು ಪ್ರದರ್ಶನದ ದೃಶ್ಯ.

**ದಿವ್ಯತೇಜ:** ಪುಣ್ಯಕ್ಷೇತ್ರಗಳ ವಿಶೇಷತೆ ಏನು? ನಾವು ಏಕೆ ಪುಣ್ಯಕ್ಷೇತ್ರಕ್ಕೆ ಭೇಟಿ ನೀಡಬೇಕು ಎಂಬ ಬಗ್ಗೆ ಮಾಹಿತಿ ನೀಡಲು ಈ ಮಳಿಗೆ ತೆರೆಯಲಾಗಿತ್ತು. ಪ್ರಸಿದ್ಧ ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ, ಚಾಮುಂಡಿ ದೇವಾಲಯ ಸೇರಿ ವಿವಿಧ ದೇವಸ್ಥಾನಗಳ ಬಗ್ಗೆ ಮಾದರಿಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದ್ದರು. ನಮ್ಮ ಇಷ್ಟಾರ್ಥಗಳನ್ನು ಈಡೇರಿಸಲು ಆಸ್ತಿಕರು ದೇವಸ್ಥಾನಗಳಿಗೆ ಭೇಟಿ ನೀಡಿ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ. ಇದು ಅವರ ನಂಬಿಕೆ. ಅಲ್ಲಿಗೆ ಹೋದರೆ ಮನಸ್ಸಿಗೆ ನವಚೈತನ್ಯ ಮೂಡುತ್ತದೆ. ಅದರಿಂದ ಜನರು ಪುಣ್ಯಕ್ಷೇತ್ರಗಳಿಗೆ ಸ್ಥಳಕ್ಕೆ ಹೋಗುತ್ತಾರೆ ಎಂದು ವಿದ್ಯಾರ್ಥಿಗಳು ವಿವರಣೆ ನೀಡುತ್ತಿದ್ದರು.

**ನಿಮಿತ್ತಂ, ಲೋಕದರ್ಶನ:** ಈ ಎರಡು ಸ್ಟಾಲ್‌ಗಳಲ್ಲಿ ಒಂದೇ ವಿಷಯದ 14 ಲೋಕಗಳ ಬಗ್ಗೆ ವಿದ್ಯಾರ್ಥಿಗಳು ವಿಶೇಷ ಮಾಹಿತಿ ನೀಡಿದರು. ಭೂಮಿ ಮಧ್ಯದಲ್ಲಿದ್ದು, ಭೂಮಿಯ ಮೇಲೆ ಏಳು ಮತ್ತು ಕೆಳಗೆ ಏಳು ಸೇರಿ ಒಟ್ಟು 14 ಲೋಕಗಳು ಬರುತ್ತವೆ. ಸತ್ಯ, ತಪ, ಜನ, ಮಹಾರ್, ಸ್ವರ್ಗ, ಬುವಾರ್ ಮತ್ತು ಬುರ್ ಲೋಕಗಳು ಭೂಮಿಯ ಮೇಲ್ಗಡೆ ಬರುತ್ತವೆ. ಇವು ದೇವಾನುದೇವತೆಗಳು ವಾಸಮಾಡುವ ಸ್ಥಳಗಳು ಹಾಗೂ ಇಲ್ಲಿ ಹೇರಳ ಸಂಪತ್ತುಗಳು ಸಿಗುತ್ತವೆ ಎಂಬ ನಂಬಿಕೆ ಇದೆ. ಭೂಮಿಯ ಕೆಳಗಡೆ ಅತಳ, ವಿತಳ, ಸುತಳ, ತಳಾತಳ, ಮಹಾತಳ,ರಸಾತಳ ಮತ್ತು ಪಾತಾಳ ಲೋಕಗಳು ಇವೆ. ಪ್ರತಿಯೊಂದು ಲೋಕಗಳ ಬಗ್ಗೆ ಚಿತ್ರ ಬಿಡಿಸಿ ಅದರ ವಿಶೇಷ ಏನು ಎಂಬುದರ ಬಗ್ಗೆ ವಿದ್ಯಾರ್ಥಿಗಳು ಅನಾವರಣಗೊಳಿಸಿದರು.

**ಮಯಾ (Mayaa):** ಇದರಲ್ಲಿ ವೇಸರ ವಾಸ್ತು ಶಿಲ್ಪಿಗಳ ಬಗ್ಗೆ ವಿದ್ಯಾರ್ಥಿಗಳು ವಿಶೇಷ ಮಾಹಿತಿ ಹಂಚಿಕೊಂಡರು. ಇದು ಬಾದಾಮಿ ಚಾಲುಕ್ಯರ ಕಾಲದಲ್ಲಿ ಆರಂಭವಾಗಿತ್ತು. ಸೂರ್ಯಕಿರಣಗಳ ವಿರುದ್ಧವಾಗಿ ವಿಗ್ರಹಗಳನ್ನು ಕೆತ್ತಲಾಗಿದೆ. ಗುಹೆಯಲ್ಲಿ ನಟರಾಜ ವಿಗ್ರಹ ಆಕರ್ಷಕ ಕೇಂದ್ರವಾಗಿದೆ. ಹಂಪೆಯಲ್ಲಿ ಉಗ್ರನರಸಿಂಹ ವಿಗ್ರಹ ಇದ್ದರೆ, ಬಾದಾಮಿಯಲ್ಲಿ ಶಾಂತನರಸಿಂಹ ವಿಗ್ರಹವಿದೆ ಎಂದು ತ್ರಿವಿಕ್ರಮ ವಿಗ್ರಹಗಳ ವಿಶೇಷತೆಯನ್ನು ವಿದ್ಯಾರ್ಥಿಗಳು ವಿವರಿಸಿದರು.

### ವಾಸ್ತುಶಿಲ್ಪ ವಿಶ್ವಮಿತ್ರಾಂ

ಭಾರತೀಯ ವಾಸ್ತುಶಿಲ್ಪಗಳ ಬಗ್ಗೆ ವಿದ್ಯಾರ್ಥಿಗಳು ಎಳೆಎಳೆಯಾಗಿ ಬಿಡಿಸಿದರು. ಪ್ರಸಿದ್ಧ ವಿಜಯನಗರ ಅರಸರು, ಗಂಗರು, ಚೋಳರು, ಪಲ್ಲವರು, ರಾಷ್ಟ್ರಕೂಟರು, ಮರಾಠರು, ಹೊಯ್ಸಳರು, ಮೈಸೂರು ಅರಸರ ಸೇರಿ ವಿವಿಧ ರಾಜರ ಕಾಲದಲ್ಲಿ ಹೇಗೆ ಸ್ಮಾರಕಗಳು, ದೇವಸ್ಥಾನಗಳನ್ನು ನಿರ್ಮಿಸಲಾಗಿತ್ತು. ಸಾವಿರಾರು ವರ್ಷಗಳು ಕಳೆದರೂ ಅದರ ಪ್ರತಿರೂಪ ಹಾಗೇ ಉಳಿದಿದೆ. ಕೈಗಳಿಂದಲೇ ಶಿಲೆಗಳನ್ನು ಹೇಗೆ ಕೆತ್ತನೆ ಮಾಡಿದ್ದಾರೆ ಬಗ್ಗೆ ಮಾಹಿತಿ ನೀಡಿದರು.

